# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 477 |
| 3 | ಉತ್ತರಿಸಬೇಕಾದ ದಿನಾಂಕ | : | 08-12-2023 |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>MGNREGA ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಕೂಲಿ ಪಾವತಿಗೆ ಮತ್ತು ಸಾಮಗ್ರಿ ವೆಚ್ಚ ಪಾವತಿಗೆ ಹಣಕಾಸಿನ ಕೊರತೆ ಏನಾದರು ಇದೆಯೇ; (ವಿವರ ನೀಡುವುದು)</td><td>ಹಣಕಾಸಿನ ಕೊರತೆ ಇರುವುದಿಲ್ಲ, MGNREGA ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ನಿರಂತರವಾಗಿ ಹಣಬಳಕೆ ಪ್ರಮಾಣ ಪತ್ರ ಹಾಗೂ ಅನುದಾನ ಬಿಡುಗಡೆ ಕೋರಿಕೆ ಪತ್ರಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತಿದ್ದು, ಅದರಂತೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗಿರುತ್ತದೆ.</td></tr>
<tr><td>ಆ)</td><td>ಸದರಿ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; (ವಿವರ ನೀಡುವುದು)</td><td>ನರೇಗಾ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th>ಅನುದಾನ ಬಿಡುಗಡೆ</th></tr>
<tr><td>2020-21</td><td>5418.64</td></tr>
<tr><td>2021-22</td><td>5454.60</td></tr>
<tr><td>2022-23</td><td>6352.81</td></tr>
</table>
ಲೆಕ್ಕ ತಪಾಸಣಾ ವರದಿಯಂತೆ</td></tr>
<tr><td>ಇ)</td><td>ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ MGNREGA ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ಪ್ರಗತಿಯ ವಿವರಗಳನ್ನು ಗ್ರಾಮ ಪಂಚಾಯತಿವಾರು ನೀಡುವುದು;</td><td>ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ ನರೇಗಾ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ಪ್ರಗತಿಯ ವಿವರವನ್ನು ಅನುಬಂಧ – 1 ಎಂದು ಗುರುತಿಸಿ ಲಗತ್ತಿಸಿದೆ.</td></tr>
<tr><td>ಈ)</td><td>ಸಾಮಾಗ್ರಿ ವೆಚ್ಚ ಪಾವತಿಸಲು (Material Payment) ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಕಾಲಕ್ಕೆ ಹಣ ಪಾವತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?</td><td>ಸಾಮಾಗ್ರಿ ವೆಚ್ಚ ಪಾವತಿಗೆ ಸಂಬಂಧಿಸಿದಂತೆ, MGNREGA ಯೋಜನೆಯಡಿ ಅನುದಾನ ಲಭ್ಯವಿದ್ದು, ಜಿಲ್ಲೆಗಳಿಂದ ಪ್ರಸ್ತಾವನೆ/ ಬೇಡಿಕೆಗಳನುಸಾರ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.</td></tr>
</table>

ಸಂಖ್ಯೆ:ಗ್ರಾಅಪ/611/ಉಖಾಯೋ/2023

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
ಸಚಿವರು

| ಅನುಬಂಧ - 1 | | | | | | | | | | |
|---|---|---|---|---|---|---|---|---|---|---|
| LAQ-477 | | | | | | | | | | |
| Sl.No | District | Financial Year 2020-21 | | | Financial Year 2021-22 | | | Financial Year 2022-23 | | |
| | | Ongoing | Completed | Total | Ongoing | Completed | Total | Ongoing | Completed | Total |
| 1 | BAGALKOTE | 7 | 21711 | 21718 | 135 | 26547 | 26682 | 6724 | 13732 | 20456 |
| 2 | VIJAYPURA | 204 | 18375 | 18579 | 263 | 24961 | 25224 | 9534 | 18954 | 28488 |